# ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ, ಕೇಂದ್ರ ಕಛೇರಿ, ಬೆಂಗಳೂರು-560 027.

ಸಂ:ಕರಾಸಾ/ಕೇಕ/ಸಂ/ಸಿ3/ 7234 /2018-19 ದಿನಾಂಕ : 14/02/2019

## ಸುತ್ತೋಲೆ ಸಂಖ್ಯೆ : 1465 / 2019

**ವಿಷಯ : ನಿಗಮದ ಬಸ್‌ಗಳಲ್ಲಿ ಪ್ರಯಾಣಿಕಸಹಿತ ಲಗೇಜ್‌ಗಳಿಗೆ ಲಗೇಜ್ ಟ್ಯಾಗ್ ಅಳವಡಿಸುವುದು ಮತ್ತು ಲಗೇಜ್ ಕಳವು/ ಕಾಣೆಯಾದಾಗ ಅನುಸರಿಸಬೇಕಾದ ಕ್ರಮಗಳು.**

*****

ಕ.ರಾ.ರ.ಸಾ.ನಿಗಮದ ಬಸ್ಸುಗಳಲ್ಲಿ ಪ್ರಯಾಣಿಕರ ಸುರಕ್ಷತೆಯ ಜೊತೆಗೆ ಪ್ರಯಾಣಿಕರ ಲಗೇಜ್‌ಗಳನ್ನೂ ಸಹ ಸುರಕ್ಷಿತವಾಗಿ ಕೊಂಡೊಯ್ಯಬೇಕಿರುವುದು ಪ್ರಯಾಣಿಕರ ಹಾಗೂ ನಿಗಮದ ಸಿಬ್ಬಂದಿಗಳ ಜಂಟಿ ಜವಾಬ್ದಾರಿಯಿರುತ್ತದೆ.

ಪ್ರಸ್ತುತ ಪ್ರಯಾಣಿಕ ಸಹಿತ ಲಗೇಜ್‌ಗಳನ್ನು ಲಗೇಜ್ ಬಾಕ್ಸ್‌ನಲ್ಲಿ ಹಾಕುವ ಸಮಯದಲ್ಲಿ ಹಾಗೂ ಸದರಿ ಲಗೇಜ್ ಕಳವು / ಕಾಣೆಯಾದ ಸಂದರ್ಭದಲ್ಲಿ ಅನುಸರಿಸಬೇಕಾದ ಕ್ರಮಗಳ ಬಗ್ಗೆ ನಿರ್ದೇಶನಗಳಿರುವುದಿಲ್ಲ. ಆದುದರಿಂದ ಈ ಸುತ್ತೋಲೆಯನ್ನು ಹೊರಡಿಸಲಾಗಿದೆ.

ನಿಗಮದ ರಾಜಹಂಸ ಹಾಗೂ ಇತರೆ ಮೇಲ್ದರ್ಜೆಯ ಬಸ್ಸುಗಳಲ್ಲಿ (ನಿರ್ದಿಷ್ಟ ದೂರದ ಮಿತಿಯಿಲ್ಲದೇ) ಪ್ರಯಾಣಿಸುವ ಪ್ರಯಾಣಿಕರು ಲಗೇಜುಗಳನ್ನು ವಾಹನಗಳ ಲಗೇಜು ಬಾಕ್ಸ್‌ಗಳಲ್ಲಿ ಹಾಕುವಾಗ ಈ ಕೆಳಕಂಡ ಸೂಚನೆಗಳನ್ನು ತಪ್ಪದೇ ಅನುಸರಿಸುವುದು.

1. ಪ್ರಯಾಣಿಕರು ಬೆಲೆಬಾಳುವ ವಸ್ತುಗಳನ್ನು ತಮ್ಮ ಬಳಿಯೇ ಇಟ್ಟುಕೊಂಡು ಪ್ರಯಾಣಿಸುವುದು. ಬೆಲೆಬಾಳುವ ವಸ್ತುಗಳು ಕಾಣೆಯಾದಲ್ಲಿ ನಿಗಮವು ಜವಾಬ್ದಾರಿಯಲ್ಲ ಎಂಬುದನ್ನು ಪ್ರಯಾಣಿಕರಿಗೆ ತಿಳಿಸುವುದು.
2. ಲಗೇಜು ಬಾಕ್ಸ್‌ಗಳಲ್ಲಿ ಲಗೇಜುಗಳನ್ನು ಸಾಗಿಸುವಾಗ ಬಸ್ಸಿನ ನಿರ್ವಾಹಕರು ಲಗೇಜುಗಳಿಗೆ "ಲಗೇಜ್ ಟ್ಯಾಗ್"ಗಳನ್ನು ಭರ್ತಿಮಾಡಿ ಕಡ್ಡಾಯವಾಗಿ ಹಾಕುವಂತೆ ಸೂಚಿಸುವುದು.
3. ನಿಗಮದ ವಾಹನಗಳಲ್ಲಿ ಪ್ರಯಾಣಿಕರ ಲಗೇಜುಗಳನ್ನು ಲಗೇಜು ಬಾಕ್ಸ್‌ನಲ್ಲಿ ಇರಿಸುವಾಗ ತಪ್ಪದೇ ಲಗೇಜು ಟ್ಯಾಗ್‌ಗಳನ್ನು ಹಾಕಿ, ಅದರ ಒಂದು ಪ್ರತಿಯನ್ನು ಪ್ರಯಾಣಿಕರಿಗೆ ನೀಡುವುದು ಹಾಗೂ ಅವರು ಇಳಿಯುವ ಸ್ಥಳದಲ್ಲಿ ಚಾಲನಾ ಸಿಬ್ಬಂದಿಗಳು ಅದನ್ನು ಪಡೆದು ಅವರ ಲಗೇಜುಗಳನ್ನು ಸಂಬಂಧಪಟ್ಟ ಪ್ರಯಾಣಿಕರಿಗೆ ಹಿಂದಿರುಗಿಸುವುದು.
4. ಲಗೇಜ್ ಟ್ಯಾಗ್‌ಗಳ ನಮೂನೆಯನ್ನು ಈ ಸುತ್ತೋಲೆಯೊಂದಿಗೆ ಅಡಕಗೊಳಿಸಿದೆ. ಸದರಿ ನಮೂನೆಯನ್ವಯ ಲಗೇಜ್ ಟ್ಯಾಗ್‌ಗಳನ್ನು ನಿಗಮದ ಕರಾಸಾ ಮುದ್ರಣಾಲಯದಿಂದ ಮುದ್ರಿಸಿಕೊಳ್ಳುವುದು.
5. ಘಟಕಗಳಲ್ಲಿ ಲಗೇಜ್ ಟ್ಯಾಗ್‌ಗಳನ್ನು ನಿರ್ವಾಹಕರಿಗೆ ವಿತರಿಸಲು ವೇ ಬಿಲ್ಲು ಮತ್ತು ಲಗೇಜು ಪುಸ್ತಕಗಳ ನಿರ್ವಹಿಸುವ ಮಾದರಿಯಲ್ಲಿ ಪ್ರತ್ಯೇಕವಾದ ದಫ್ತರನ್ನು ಇರಿಸಿ ನಿಗಮವು ಎಲ್ಲಾ ನಿರ್ವಾಹಕರುಗಳಿಗೆ ವಿತರಿಸುವುದು ಮತ್ತು ಸರಿಯಾಗಿ ಲೆಕ್ಕಾಚಾರ ಮಾಡುವುದು.
6. ಲಗೇಜ್ ಟ್ಯಾಗ್‌ಗಳ ಬಳಕೆ ಸಂಬಂಧ ನಿರ್ವಾಹಕರುಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡುವುದು ಹಾಗೂ ದೂರುಗಳಿಗೆ ಅವಕಾಶ ನೀಡದಂತೆ ಕರ್ತವ್ಯ ನಿರ್ವಹಿಸಲು ನಿರ್ದೇಶನ ನೀಡುವುದು.
7. ಲಗೇಜ್ ಟ್ಯಾಗ್‌ಗಳನ್ನು ನೀಡದ ನಿರ್ವಾಹಕರ / ಚಾಲಕರ ವಿರುದ್ಧ ಶಿಸ್ತಿನ ಕ್ರಮ ಜರುಗಿಸುವುದು.
8. ಘಟಕಗಳಲ್ಲಿ ಲಗೇಜ್ ಟ್ಯಾಗ್‌ಗಳನ್ನು ಅವಶ್ಯಕತೆಗನುಗುಣವಾಗಿ ಸಂಗ್ರಹಿಸಿ, ಚಾಲಕ ನಿರ್ವಾಹಕರಿಗೆ ಒದಗಿಸುವುದು.

ಮುಂಜಾಗ್ರತಾ ಕ್ರಮಗಳನ್ನು ಅನುಸರಿಸಿದಾಗ್ಯೂ ಲಗೇಜ್ ಟ್ಯಾಗ್‌ಗಳು ಅಳವಡಿಸಿದ ಲಗೇಜ್‌ಗಳು ಕಳವು ಅಥವಾ ಕಾಣೆಯಾದ ಸಂದರ್ಭದಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಕೆಳಕಂಡಂತೆ ವಿವರಿಸಲಾಗಿದೆ:-

1. ನಿಗಮದ ಬಸ್ಸುಗಳಲ್ಲಿ ಪ್ರಯಾಣಿಕಸಹಿತ ಲಗೇಜ್‌ಗಳಿಗೆ ಟ್ಯಾಗ್ ಹಾಕಿ ಪ್ರಯಾಣಿಸುತ್ತಿದ್ದು, ಆಕಸ್ಮಿಕ ಕಾರಣಗಳಿಂದಾಗಿ ಲಗೇಜ್ ಕಳವಾದಲ್ಲಿ / ಕಾಣೆಯಾದಲ್ಲಿ, ಗರಿಷ್ಠ ರೂ.೫,೦೦೦/- (ರೂ ಐದು ಸಾವಿರ) ಪರಿಹಾರ ಧನ ನೀಡಲು ಅವಕಾಶ ಕಲ್ಪಿಸಲಾಗಿದೆ.
2. ಇಂತಹ ಪ್ರಕರಣಗಳಲ್ಲಿ ಸಮಗ್ರ ತನಿಖೆ ನಡೆಸಿ, ನೈಜತೆ ಕಂಡುಬಂದಲ್ಲಿ ಮಾತ್ರ ರೂ.೫,೦೦೦/- ಗಳವರೆಗೆ ಪರಿಹಾರ ಧನ ನೀಡಲು ವಿಭಾಗೀಯ ನಿಯಂತ್ರಣಾಧಿಕಾರಿಗಳು ಕ್ರಮ ಕೈಗೊಳ್ಳುವುದು. ಸಿಬ್ಬಂದಿಯ ನಿರ್ಲಕ್ಷ್ಯತೆ ಕಂಡುಬಂದಲ್ಲಿ ಅವರ ವಿರುದ್ಧ ಶಿಸ್ತಿನ ಕ್ರಮ ಜರುಗಿಸುವುದು.
3. ಲಗೇಜ್ ಕಳೆದುಹೋದ ಕಾರಣ ಪರಿಹಾರಧನ ವಿತರಿಸಿದ ಪ್ರಕರಣಗಳ ಬಗ್ಗೆ ತಿಂಗಳಿಗೊಮ್ಮೆ ಕೇಂದ್ರ ಕಛೇರಿಗೆ ಮಾಹಿತಿ ನೀಡುವುದು.
4. ಹೆಚ್ಚಿನ ಮೌಲ್ಯದ ಲಗೇಜ್ ಕಳವು / ಕಾಣೆಯಾದಲ್ಲಿ ಹೆಚ್ಚಿನ ಪರಿಹಾರ ನೀಡಲು ಅವಕಾಶವಿರುವುದಿಲ್ಲ.

**ಬಸ್ಸಿನ ಚಾಲನಾ ಸಿಬ್ಬಂದಿಗಳ ಜವಾಬ್ದಾರಿಗಳು:**

ನಿಗಮದ ಬಸ್ಸಿನಲ್ಲಿ ಲಗೇಜ್ ಸಾಗಣೆ ಮಾಡುವಾಗ ಬಸ್ಸಿನ ಚಾಲನಾ ಸಿಬ್ಬಂದಿಗಳು ಈ ಕೆಳಕಂಡ ಕ್ರಮಗಳನ್ನು ತಪ್ಪದೇ ಅನುಸರಿಸುವುದು:-

1. ಚಾಲನಾ ಸಿಬ್ಬಂದಿಗಳು ಹೆಚ್ಚು ಜವಾಬ್ದಾರಿಯಿಂದ, ಎಚ್ಚರಿಕೆಯಿಂದ ಕರ್ತವ್ಯ ನಿರ್ವಹಿಸುವುದು.
2. ಬಸ್ಸಿನ ಲಗೇಜ್ ಬಾಕ್ಸ್‌ಗಳನ್ನು ಸಮರ್ಪಕವಾಗಿ ಲಾಕಿಂಗ್ ಮಾಡಿರುವುದನ್ನು ಖಾತ್ರಿಪಡಿಸಿಕೊಳ್ಳುವುದು.
3. ಲಗೇಜ್‌ಗಳನ್ನು ವಾರಸುದಾರರಿಗೆ ಒದಗಿಸುವಾಗ ಅಥವಾ ಇತರೆ ಸಂದರ್ಭಗಳಲ್ಲಿ ಲಗೇಜ್ ಕಳವು ಆಗದಂತೆ, ಅದಲು ಬದಲಾಗದಂತೆ, ಹಾನಿಯಾಗದಂತೆ ಮುಂಜಾಗ್ರತಾ ಕ್ರಮವಹಿಸುವುದು.

ನಿಗಮದ ಸಿಬ್ಬಂದಿಗಳಿಗೆ ಮೇಲ್ಕಂಡ ಅಂಶಗಳ ಬಗ್ಗೆ ಅರಿವು ಮೂಡಿಸಿ, ಉತ್ತಮ ಕರ್ತವ್ಯ ನಿರ್ವಹಣೆಗೆ ವಿಭಾಗದ ಎಲ್ಲಾ ಅಧಿಕಾರಿಗಳು / ಮೇಲ್ವಿಚಾರಕ ಸಿಬ್ಬಂದಿಗಳು ಕ್ರಮ ವಹಿಸುವುದು. ಚಾಲನಾ ಸಿಬ್ಬಂದಿಗಳೂ ಸಹ ಯಾವುದೇ ದೂರುಗಳಿಗೆ ಅವಕಾಶ ನೀಡದಂತೆ ಕರ್ತವ್ಯ ನಿರ್ವಹಿಸಲು ಸೂಚನೆ ನೀಡಲಾಗಿದೆ.

ಈ ಸುತ್ತೋಲೆಯಲ್ಲಿನ ನಿರ್ದೇಶನಗಳು ತಕ್ಷಣದಿಂದ ಜಾರಿಗೆ ಬರಲಿದೆ. ಸುತ್ತೋಲೆ ತಲುಪಿದ್ದಕ್ಕೆ ಸ್ವೀಕೃತಿಯನ್ನು ಹಾಗೂ ಜಾರಿಗೊಳಿಸಿದ ಬಗ್ಗೆ ಅನುಸರಣಾ ವರದಿ ನೀಡುವುದು.

ವ್ಯವಸ್ಥಾಪಕ ನಿರ್ದೇಶಕರು,
ಕ.ರಾ.ರ.ಸಾ.ನಿಗಮ.

**ಪ್ರತಿಯನ್ನು :**

1) ವ್ಯವಸ್ಥಾಪಕ ನಿರ್ದೇಶಕರು, ಬೆಂಮಸಾಸಂಸ್ಥೆ / ವಾಕರಸಾಸಂಸ್ಥೆ / ಈಕರಸಾಸಂಸ್ಥೆ, ಬೆಂಗಳೂರು / ಹುಬ್ಬಳ್ಳಿ / ಕಲ್ಬುರ್ಗಿರವರ ಮಾಹಿತಿಗಾಗಿ ಕಳುಹಿಸಲಾಗಿದೆ.
2) ಎಲ್ಲಾ ಇಲಾಖಾ ಮುಖ್ಯಸ್ಥರುಗಳು, ಕ.ರಾ.ರ.ಸಾ. ನಿಗಮ, ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
3) ಮುಖ್ಯ ಸಂಚಾರ ವ್ಯವಸ್ಥಾಪಕರು, ಬೆಂಮಸಾಸಂಸ್ಥೆ / ವಾಕರಸಾಸಂಸ್ಥೆ / ಈಕರಸಾಸಂಸ್ಥೆ, ಬೆಂಗಳೂರು / ಹುಬ್ಬಳ್ಳಿ / ಕಲ್ಬುರ್ಗಿರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
4) ಎಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿಗಳು / ವಿಭಾಗೀಯ ಸಂಚಾರ ಅಧಿಕಾರಿಗಳು, ಕ.ರಾ.ರ.ಸಾ. ನಿಗಮ, ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
5) ಮುದ್ರಣ ನಿಯಂತ್ರಣಾಧಿಕಾರಿಗಳು, ಕ.ರಾ.ಸಾ.ಮುದ್ರಣಾಲಯ, ಬೆಂಗಳೂರುರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
6) ಅಧ್ಯಕ್ಷರು / ಉಪಾಧ್ಯಕ್ಷರ ಆಪ್ತ ಕಾರ್ಯದರ್ಶಿಗಳು, ಕ.ರಾ.ರ.ಸಾ.ನಿಗಮ, ಕೇಂದ್ರ ಕಛೇರಿ, ಬೆಂಗಳೂರು, ರವರ ಮಾಹಿತಿಗಾಗಿ ಕಳುಹಿಸಲಾಗಿದೆ.
7) ವ್ಯವಸ್ಥಾಪಕ ನಿರ್ದೇಶಕರು / ನಿರ್ದೇಶಕರು (ಭ ಮತ್ತು ಜಾ) / ನಿರ್ದೇಶಕರು (ಸಿ ಮತ್ತು ಪ) ರವರ ಹಿರಿಯ / ಆಪ್ತ ಕಾರ್ಯದರ್ಶಿಗಳು, ಕ.ರಾ.ರ.ಸಾ. ನಿಗಮ, ಕೇಂದ್ರ ಕಛೇರಿ, ಬೆಂಗಳೂರು, ರವರ ಮಾಹಿತಿಗಾಗಿ ಕಳುಹಿಸಲಾಗಿದೆ.

: ಲಗೇಜ್ ಟ್ಯಾಗ್ ನಮೂನೆ :

Luggage Tag
KSRTC




Y-19 000001

Seat No............................... Date............................

From ............................... To................................

Veh No............................

LUGGAGE TAG

Seat No........................ Date ..........................

From ............................... To..........................

Veh No...........................................................

Luggage details.................................................

Apx. Value.......................................................

Y-19 000001

**Dr/ Cr sign**

**Services extended by KSRTC:**

- For any query contact Call Center : 080-49596666
- For online reservation visit: www.ksrtc.in
- Avail 5% discount on advance group booking of 04 or more passengers
- For booking of buses on Casual Contract basis contact : 7760990535

**Other terms and conditions :**

- Please keep the Tag safely till the end of the journey.
- This tag is not transferable.
- On the non-production of luggage tag or loss of luggage tag, luggage will not be handed over to passenger.
- For loss of valuable items, KSRTC is not responsible. Passengers need to keep the valuables with them.

**Always use KSRTC services**